ಶ್ರೀ ಡಿ.ಬಿ. ಚಂದ್ರೇಗೌಡ : ನಮಗೂ ಸ್ವಲ್ಪ ಅವಕಾಶ ಕೊಡಿ, ಬೇರೆ ವಿಚಾರಗಳಿಗೂ ಅವಕಾಶ ಕೊಡಿ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳದೇ ಮಂತ್ರಿಗಳು ಕುಳಿತಿದ್ದಾರೆ.

ಶ್ರೀ ಸಿ.ಬೈರೇಗೌಡ : ಅವರು ಮಲೆನಾಡಿನಿಂದ ಬಂದಿದ್ದಾರೆ ಅವರಿಗೆ ವಿದ್ಯುಚ್ಛಕ್ತಿ ಬೇಕಾಗಿಲ್ಲ. ಅವರು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಎಷ್ಟು ಹೇಳಿದರೂ ನಮಗೆ ಸರಿಯಾದ ಉತ್ತರ ಕೊಡುತ್ತಾ ಇಲ್ಲ. ನಾವು ಕಲ್ಲಿನ ಮೇಲೆ ತಲೆ ಹೊಡೆದುಕೊಂಡ ಹಾಗೆ ಆಗುತ್ತಾ ಇದೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವು ಹೊರಗಡೆ ಹೋಗುವುದೊಂದೇ ಉಳಿದಿರುವ ಮಾರ್ಗ. ಇದು ಸರಿಯಲ್ಲ.

(ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು

ಶ್ರೀ ಸಿ. ಬೈರೇಗೌಡ : ನಮ್ಮ ಜಿಲ್ಲೆಯ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಪ್ರಮಾಣಿಕವಾದ ಪ್ರಯತ್ನ ಮಾಡುತ್ತಾ ಇಲ್ಲ. ಬರೀ ಕಾಗದದ ಮೇಲೆ ಹೇಳಿಕೆ ಕೊಡುತ್ತಾರೆ. 15 ಗಂಟೆ ಕಾಲ ವಿದ್ಯುತ್ ಕೊಡುತ್ತಿದ್ದೇವೆಂದು ಕಾಗದದ ಮೇಲೆ ಹೇಳಿಕೆ ಇದೆ. ಮಾನ್ಯ ವೀರಪ್ಪ ಮೊಯಿಲಿಯವರೇ ಇವತ್ತಿನ ದಿವಸ ಬರಲಿ. ಈ ಮಾತನ್ನು ಹಳ್ಳಿಗಳಲ್ಲಿ ರೈತರ ಮುಂದೆ ಹೇಳಿಲಿ, ಅವರು ಒಪ್ಪಿಕೊಳ್ಳಲಿ, ನಾನು ಅಲ್ಲೇ ಅವರಿಗೆ ಸಾಷ್ಟಾಂಗ ಸಮಸ್ಕಾರ ಮಾಡಿ, ಅವರ ಕ್ಷಮೆ ಬೇಡುತ್ತೇನೆ. ಇವತ್ತು ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ, ತೀವ್ರವಾಗಿದೆ ಬೆಳಿಗೆ ಉಂಟಾಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ.?

ಅಧ್ಯಕ್ಷರು : ನಾನು ಏನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಕೆ.ಇ.ಬಿ. ಚೇರ್‌ಮನ್ ಹೋಗಿದ್ದಾರೆ, ಚೀಫ್ ಇಂಜಿನಿಯರ್ಸ್ ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ : ಅದೆಲ್ಲಾ ನಿಜ ಆದರೆ...

ಶ್ರೀ ಎಂ. ವೀರಪ್ಪ ಮೊಯಿಲಿ : ತಾವೇ ನಿಂತು ಬಿಟ್ಟರೆ ನಾವು ಮಾತನಾಡಬೇಕೋ, ಬೇಡವೋ, Whether you want me to reply or not? We cannot just run the House like this. I am sorry.

MR. SPEAKER : You are right. We cannot run the House like this. Certainly, you are right. I concede to the point.

ಶ್ರೀ ಎಂ. ವೀರಪ್ಪ ಮೊಯಿಲಿ : ಫೆಬ್ರವರಿ 25ನೇ ತಾರೀಖು ಕೆ.ಇ.ಬಿ. ಅಧ್ಯಕ್ಷರು ಹೋಗಿದ್ದರು. ಚೀಫ್ ಎಂಜಿನಿಯರ್ ಹೋಗಿದ್ದರು. ಅಲ್ಲಿ ಏನು ದುರಸ್ತಿ ಮಾಡಬೇಕೊ ಅದನ್ನೆಲ್ಲ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ತೊಂದರೆ ಇಲ್ಲ ಎಂದು ಹೇಳುವುದಿಲ್ಲ. ರೈತರ ಸಮಸ್ಯೆ ಜ್ವಲಂತವಾಗಿದೆ. ಇವತ್ತು ತಾವು ಹೊಸ ಸಮಸ್ಯೆಗಳನ್ನು ತಾವು ಹೇಳಿದಿರಿ. ನಾವು ಮುಖ್ಯ ಎಂಜಿನಿಯರ್‌ರವರನ್ನು ಇವತ್ತೇ ಕಳುಹಿಸುತ್ತೇವೆ. ಇವತ್ತೇ ಕಳಿಸಿ, ಅಲ್ಲಿ ಸ್ಥಳೀಯವಾಗಿ ಏನು ದುರಸ್ತಿ ಮಾಡಬೇಕು, ಏನು ಸಲಹೆ ಮಾಡುವುದಕ್ಕೆ ಸಾಧ್ಯ ಇದೆ, ಅದನ್ನು ಮಾಡುವುದಕ್ಕೆ ನಾವು ಸಿದ್ಧರಿದ್ದೇವೆ. ಇವತ್ತು ಇಷ್ಟು ಆಶ್ವಾಸನೆ ನಾವು ಕೊಡುತ್ತಿದ್ದೇವೆ.

Practically the whole KEB with lock, stock and barrel is in Kolar District Since ten days.